ಅಸಲು ದಾವೆ ನಂ.20/2018 ಸಿ.ಡಬ್ಲೂಃ 1

ದಿನಾಂಕಃ 20/01/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ವಾದಿ ಪರವಾಗಿ ಶ್ರೀ ಹೆಚ್.ಆರ್.ಎನ್. ವಕೀಲರಿಂದ

1. ನಾನು ಹಾಜರುಪಡಿಸಿರುವ ನಿಶಾನೆ ಸಿ-2 ರಿಂದ 11 ರ ಮೂಲ ಪ್ರತಿಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ನ್ಯಾಯಾಲಯ ನಿರ್ದೇಶನ ನೀಡಿದರೆ ಮೂಲ ಪ್ರತಿಗಳನ್ನು ಹಾಜರುಪಡಿಸಬಲ್ಲೆ ಎಂದು ನುಡಿಯುತ್ತಾರೆ. ನಮ್ಮ ಕಛೇರಿಗೆ ಮುಳುಗಡೆ ಸಂತ್ರಸ್ಥರು ಪರಿಹಾರ ಪಡೆಯಲು ಸಂಬಂಧಪಟ್ಟ ವಂಶವೃಕ್ಷ ಹಾಗೂ ಇತರೆ ಮೂಲ ಪ್ರತಿಗಳನ್ನು ಹಾಜರುಪಡಿಸುತ್ತಾರೆ ಎಂದರೆ ಸರಿ. ಶಿವೇಗೌಡರವರು ಪ್ರಸ್ತುತ ಪ್ರಕರಣದಲ್ಲಿ ಪರಿಹಾರ ಪಡೆಯಲು ವಂಶವೃಕ್ಷವನ್ನು ಹಾಜರುಪಡಿಸಿರುತ್ತಾರೆ. ಸದರಿ ವಂಶವೃಕ್ಷದ ದೃಢೀಕೃತ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆಯೋ ಅಥವಾ ಇಲ್ಲವೋ ನನಗೆ ನೆನೆಪಿರುವುದಿಲ್ಲ. ಅರ್ಜಿದಾರರು ನನ್ನ ಮುಂದೆ ಹಾಜರುಪಡಿಸಿರುವ ದಾಖಲಾತಿಗಳು ಸತ್ಯವಾದ ದಾಖಲಾತಿಗಳೋ ಅಥವಾ ಆಗಿರುವುದಿಲ್ಲವೋ ಎಂಬುದನ್ನು ನಮ್ಮ ಹಿಂದಿನ ಅಧಿಕಾರಿಗಳು ಪರಿಶೀಲನೆ ಮಾಡಿರುತ್ತಾರೆ. ಒಬ್ಬ ವ್ಯಕ್ತಿ ಒಪ್ಪಿಗೆ ಪ್ರಮಾಣ ಪತ್ರ ನೀಡಿದರೆ ಅದಕ್ಕೆ ಸಂಬಂಧ ಪಟ್ಟಂತೆ ಪ್ರತ್ಯೇಕ ಹೇಳಿಕೆ ತೆಗೆದುಕೊಳ್ಳಬೇಕು ಎಂದರೆ ಸರಿಯಲ್ಲ. ಪ್ರತ್ಯೇಕ ಹೇಳಿಕೆ ಮಾಡಿಕೊಂಡಿರುವುದಿಲ್ಲ ಕಾರಣ ಅದರ ಅವಶ್ಯಕತೆ ಇರುವುದಿಲ್ಲ. ಒಪ್ಪಿಗೆ ನೀಡಿದಂತಹ ವ್ಯಕ್ತಿ ನಮ್ಮ ಮುಂದೆ ಹಾಜರಾಗಿ ಒಂದು ಪ್ರಮಾಣ ಪತ್ರ ನೀಡಬೇಕು ಎಂದರೆ ಸರಿಯಲ್ಲ . ನಿಶಾನೆ ಸಿ-2 ರಿಂದ 11 ನಮ್ಮ ಕಛೇರಿಯ ದಾಖಲಾತಿಗಳು ಎಂದರೆ ಸರಿ. ಸದರಿ ದಾಖಲಾತಿಗಳನ್ನು ಅರ್ಜಿದಾರರಿಗೆ ನೀಡುತ್ತೇವೆ ಎಂದರೆ ಸರಿಯಲ್ಲ.

2. ನಾನು ಹಾಜರುಪಡಿಸಿರುವ ನಿಶಾನೆ ಸಿ-4 ರ ಫಾರಂ ಬಿ ಸುಳ್ಳು ದಾಖಲಾತಿ ಎಂದರೆ ಸರಿಯಲ್ಲ. ನಿಶಾನೆ ಸಿ-4 ರಲ್ಲಿರುವ ಸಹಿ ಈರೇಗೌಡನ ಸಹಿ ಆಗಿರುವುದಿಲ್ಲ ಎಂದರೆ ಸರಿ. ಆದರೆ ಅದು ವೀರಭದ್ರೇಗೌಡನ ಸಹಿ ಎಂದು ನುಡಿಯುತ್ತಾರೆ. ಸದರಿ ನಿಶಾನೆ ಪಿ-4 ರಲ್ಲಿ ಶಿವೇಗೌಡ ಎಂದು ನೀಲಿ ಶಾಹಿಯಲ್ಲಿ ಸಹಿ ಇದೆ ಹಾಗೂ ವೀರಭದ್ರೇಗೌಡ ಎಂದು ಕಪ್ಪು ಶಾಹಿಯಲ್ಲಿ ಸಹಿ ಇದೆ ಎಂದರೆ ಸರಿ. ನಿಶಾನೆ ಪಿ-4 ರಲ್ಲಿರುವ ಎಲ್ಲಾ ಒಕ್ಕಣೆಗಳು ಕಪ್ಪು ಶಾಹಿಯಲ್ಲಿರುತ್ತವೆ ಎಂದರೆ ಸರಿ. ಕಪ್ಪು ಶಾಹಿಯಲ್ಲಿರುವ ವ್ಯಕ್ತಿಯೇ ವೀರಭದ್ರೇಗೌಡ ಎಂದು ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಶಾನೆ ಸಿ-2 ರ ದಾಖಲಾತಿಯಂತೆ ಸ.ನಂ.133 ರಲ್ಲಿ ರಲ್ಲಿ 10 ¾ ಗುಂಟೆ ಹಾಗೂ ಸ.ನಂ.133/ಪಿ9 ರಲ್ಲಿ 8 ಗುಂಟೆ ಜಮೀನು ಸ್ವಾಧೀನವಾಗಿರುತ್ತದೆ ಎಂದರೆ ಸರಿ. ಅ ಎರಡೂ ಜಮೀನುಗಳು ವಾದಿ ಪ್ರತಿವಾದಿಯರ ತಂದೆ ದೇವೇಗೌಡ ಬಿನ್ ಅಣ್ಣೇಗೌಡ ಉಃ ಈಗೇಗೌಡರ ಹೆಸರಿನಲ್ಲಿರುತ್ತದೆ ಎಂದರೆ ಸರಿ. ಶಿವೇಗೌಡನು ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ಆತನೊಬ್ಬನೇ ವಾರಸುದಾರನೆಂದು ಹೇಳಿ ಪೂರ್ಣ ಪರಿಹಾರವನ್ನು ಪಡೆದುಕೊಂಡಿರುತ್ತಾನೆ ಎಂದರೆ ಸರಿಯಲ್ಲ. ವೀರಭದ್ರೇಗೌಡರವರು ತನ್ನ ಅಣ್ಣನಾದ ಶಿವೇಗೌಡನ ಪರವಾಗಿ ಪರಿಹಾರದ ಹಣ ನೀಡಬಹುದೆಂದು ಒಪ್ಪಿಗೆ ಪತ್ರ ನೀಡಿರುತ್ತಾನೆ. ಸದರಿ ಒಪ್ಪಿಗೆ ಪತ್ರವನ್ನು ನಮ್ಮ ಕಛೇರಿಯ ಅಧಿಕಾರಿಗಳು ಹಾಗೂ ಶಿವೇಗೌಡ ಷಾಮೀಲಾಗಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಪ್ರತಿವಾದಿ ಪರವಾಗಿ ಶ್ರೀ ಎಂ.ಎನ್.ಆರ್. ವಕೀಲರಿಂದ

3. ಒಪ್ಪಿಗೆ ಪತ್ರವನ್ನು ಪಡೆಯುವ ಮೊದಲು ಒಪ್ಪಿಗೆ ನೀಡುವ ವ್ಯಕ್ತಿಯಿಂದ ಗುರುತಿನ ಚೀಟಿಯನ್ನು ಪಡೆದಿರುತ್ತೇವೆ. ಒಪ್ಪಿಗೆ ನೀಡಿದ ವ್ಯಕ್ತಿಯಿಂದ ಪಡಿತರ ಚೀಟಿಯನ್ನು ಪಡೆಯಲಾಗಿದೆ. ಒಪ್ಪಿಗೆದಾರನ ಫೋಟೋವನ್ನೂ ಸಹ ಪಡೆಲಾಗಿದೆ.

(ಈ ಹಂತದಲ್ಲಿ ವಾದಿ ಪರ ವಕೀಲರು ಪಾಟೀ ಸವಾಲಿಗಾಗಿ ಅನುಮತಿ ಕೋರಿದ್ದು ವಾದಿ ಹಾಗೂ ಪ್ರತಿವಾದಿ ಪರ ವಕೀಲರ ವಾದಗಳನ್ನು ಆಲಿಸಿದ ನಂತರ ವಾದಿ ಪರ ವಕೀಲರಿಗೆ ಪಾಟೀ ಸವಾಲಿಗಾಗಿ ಅನುಮತಿ ನೀಡಲಾಯಿತು.)

ಪಾಟೀ ಸವಾಲು ವಾದಿ ಪರವಾಗಿ ಶ್ರೀ ಹೆಚ್.ಆರ್.ಎನ್. ವಕೀಲರಿಂದ

4. ಯಾವ ದಿನಾಂಕದಂದು ಒಪ್ಪಿಗೆ ನೀಡಿದ ವ್ಯಕ್ತಿಯಿಂದ ಪಡಿತರ ಚೀಟಿಯನ್ನು ಪಡೆಯಲಾಗಿದೆ ಹಾಗೂ ಫೋಟೋವನ್ನು ಪಡೆಯಲಾಗಿದೆ ಎಂದು ನಮೂದು ಇರುವುದಿಲ್ಲ ಅದು ಜೆರಾಕ್ಸ್ ದಾಖಲಾತಿಯಾಗಿರುತ್ತದೆ. ಫೋಟೋ ಮೇಲೆ ನಮ್ಮ ಕಛೇರಿಯ ಸೀಲ್ ಇರುವುದಿಲ್ಲ. ಶಿವೇಗೌಡ ಫೋಟೋ ಹಾಗೂ ಪಡಿತರ ಚೀಟಿಯನ್ನು ಸೃಷ್ಟಿ ಮಾಡಿ ನೀಡಲಾಗಿದೆ ಎಂದರೆ ಸರಿಯಲ್ಲ. ಪಡಿತರ ಚೀಟಿಯ ಮೇಲೆ ವೀರಭದ್ರ ಎಂದು ಹೆಸರು ನಮೂದು ಇರುತ್ತದೆ ಎಂದರೆ ಸರಿ. ಒಪ್ಪಿಗೆ ಪತ್ರದಲ್ಲಿ ವೀರಭದ್ರೇಗೌಡ ಎಂದು ಸಹಿ ಇರುತ್ತದೆ ಎಂದರೆ ಸರಿ . ಪಡಿತರ ಚೀಟಿ ಜೆರಾಕ್ಸ್ ಪ್ರತಿ ಎಂದರೆ ಸರಿ. ನಾನು ಹಾಗೂ ಶಿವೇಗೌಡ ಷರೀಕಾಗಿ ಪಡಿತರ ಚೀಟಿ ಹಾಗೂ ಫೋಟೋವನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿ ಹಾಜರುಮಾಡಲಾಗಿದೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲಾತಿಗಳು ಎಲ್ಲವೂ ಸೃಷ್ಟಿ ಮಾಡಿ ಹಾಜರುಮಾಡಲಾಗಿದೆ ಎಂದರೆ ಸರಿಯಲ್ಲ. ಮೂಲ ದಾಖಲಾತಿಗಳನ್ನು ಹಾಜರುಪಡಿಸಿದರೆ ನನ್ನ ಮೇಲೆ ಆಪಾದನೆ ಆಗಬಹುದೆಂಬ ಕಾರಣದಿಂದ ನಾನು ಮೂಲ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

(ನಾಗೇಶ ಮೂರ್ತಿ ಬಿ.ಕೆ.)

ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅರಕಲಗೂಡು.